**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.475/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂಚಿತ್ @ ಸನ್ನತ್ | ಫ್ರಾಸಾ-2 |
| ತಂದೆಯ ಹೆಸರು | : ಸುಧಾಕರ್ | ಚಾಸಾ-3 |
| ವಯಸ್ಸು | : 35 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿಸಿಟಿವಿ ಸರ್ವೀಸ್ | ದಿನಾಂಕಃ 14.10.2025 |
| ವಾಸಸ್ಥಳ | : ಬಾಳೇಹೊನ್ನೂರು | |

**<u>:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ಚಾಸಾ-1 ರವರ ಮನೆಗೆ ಸಿಸಿಟಿವಿ ಅಳವಡಿಸಲು ಹೋದಾಗ ನೋಡಿದ್ದೇನೆ. ಚಾಸಾ-4 ನನ್ನೊಂದಿಗೆ ಕೆಲಸ ಮಾಡುತ್ತಾರೆ. ಚಾಸಾ-5 ರವರು ಚಾಸಾ-1 ರವರ ಮನೆಯಲ್ಲಿ ಕೆಸಲ ಮಾಡುತ್ತಿದ್ದರು.

ದಿ.08.01.2024 ರಂದು ಚಾಸಾ-1 ರವರ ಮನೆಗೆ ಸಿಸಿಟಿವಿ ಅಳವಡಿಸಲು ನಮ್ಮನ್ನು ಕರೆಸಿದ್ದರು. ನಾವು ಅವರ ಮನೆಯ ಬಳಿ ಬೆ.8.00 ಗಂಟೆಗೆ ಹೋಗಿದ್ದೆವು. ಚಾಸಾ-1 ರವರು ಕ್ಯಾಮೆರಾ ಅಳವಡಿಸುವ ಸ್ಥಳವನ್ನು ತೋರಿಸಿ ಅವರು ಮತ್ತು ಅವರ ತಾಯಿ ಚಿಕ್ಕಮಗಳೂರಿಗೆ ಹೋಗುತ್ತೇವೆ ಎಂದು ಹೋದರು. ನಾವು ಕೆಲಸ ಮಾಡುತ್ತಿರುವಾಗ ಬೆಳಗ್ಗೆ ಸುಮಾರು 11.30 ರ ಸಮಯಕ್ಕೆ ಆರೋಪಿಯು ಚಾಸಾ-1 ರವರ ಮನೆಯ ಗೇಟಿನ ಒಳಗೆ ಬಂದರು. ಆ ಸಮಯಕ್ಕೆ ಚಾಸಾ-1 ರವರ ತಂದೆಯೂ ಸಹಾ ನಮ್ಮೊಂದಿಗೆ ಇದ್ದರು. ಆರೋಪಿಯು ಚಾಸಾ-1 ರವರ ತಂದೆಯ ಬಳಿ ಜೋರಾಗಿ ಮಾತನಾಡುತ್ತಾ ಗಲಾಟೆ ಮಾಡುತ್ತಿದ್ದರು. ಆರೋಪಿಯು ಮುಂದುವರೆದು ಚಾಸಾ-1 ರವರ ಮನೆಯ ಒಳಗೆ ಹೋಗಿ ಗಾಡ್ರೇಜ್ ಬೀರುವಿನಲ್ಲಿ ಇದ್ದ ಬಟ್ಟೆಯನ್ನು ಎಳೆದು ಹಾಕಿದ್ದರು. ಅಷ್ಟೊತ್ತಿಗೆ ಚಾಸಾ-1 ರವರ ಅಣ್ಣನ ಪತ್ನಿ ಸ್ಥಳಕ್ಕೆ ಬಂದಿದ್ದು ಅವರಿಗೂ ಸಹಾ ಆರೋಪಿ ಬೈದಿದ್ದಾರೆ. ಆರೋಪಿಯು ಮನೆಯ ಎದುರು ಇದ್ದ ಇಟ್ಟಿಗೆ ಕಲ್ಲಿನಿಂದ ಚಾಸಾ-1 ರವರ ಮನೆಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿರುತ್ತಾರೆ. ಆ ದಿನ ಮ.1.30 ರ ಸಮಯಕ್ಕೆ ಚಾಸಾ-1 ರವರು ಮನೆಗೆ ವಾಪಸ್ಸಾಗಿ ನಮ್ಮನ್ನು ವಿಚಾರಿಸಿರುತ್ತಾರೆ. ಮರುದಿನ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದಿದ್ದಾರೆ. ಆರೋಪಿಯ ಕೃತ್ಯದಿಂದ ಚಾಸಾ-1 ರವರಿಗೆ ರೂ.600/- ಗಳ ನಷ್ಟವಾಗಿದೆ.

ಸಾಕ್ಷಿಯು ಎಂ.ಒ.2 ನ್ನು ನೋಡಿ ಅದರಿಂದಲೇ ಆರೋಪಿಯು ಕಿಟಕಿ ಗಾಜಿಗೆ ಹೊಡೆದಿದ್ದು ಎಂ.ಒ.1 ಹೊಡೆದುಹೋದ ಗಾಜಿನ ಚೂರು ಎಂದು ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಹಾ ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ಆರೋಪಿ ಚಾಸಾ-1 ರವರ ತಂದೆಗೆ ಜೀವ ಬೆದರಿಕೆ ಸಹಾ ಹಾಕಿದ್ದಾರೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದ:</u>**

ನಾನು ಹೇಳಿದ ದಿನಾಂಕದಂದು ಚಾಸಾ-1 ರವರ ಮನೆಯ ಒಳಗೆ ಹೋಗಿ ನೋಡಿದ್ದೆ. ಆರೋಪಿ ಕೊಂಕಣಿ ಭಾಷೆಯಲ್ಲಿ ಮಾತನಾಡಿಕೊಂಡು ಗಲಾಟೆ ಮಾಡುತ್ತಿದ್ದರು. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿದ್ದೆ. ನನಗೆ ಕೊಂಕಣಿ ಭಾಷೆ ಅರ್ಥವಾಗುತ್ತದೆ. ಪೋಲಿಸರು ನನ್ನ ಹೇಳಿಕೆಯನ್ನು ಬರವಣಿಗೆ ಮಾಡಿದ್ದಾರೆ. ಆ ಹೇಳಿಕೆಯನ್ನು ನಾನು ಓದಿ ನೋಡಿದ್ದೇನೆ. ಕೊಂಕಣಿ ಭಾಷೆಯಲ್ಲಿ ಗಲಾಟೆ ಮಾಡುತ್ತಿದ್ದಾರೆ ಎಂದು ನನ್ನ ಹೇಳಿಕೆಯಲ್ಲಿ ಬರವಣಿಗೆಯಾಗಿದೆ. ಈಗ ನೋಡುತ್ತಿರುವ ನನ್ನ ಹೇಳಿಕೆಯಲ್ಲಿ ಸದರಿ ವಿಚಾರ ಇಲ್ಲ ಎಂದರೆ ಸರಿ. ಸದರಿ ಹೇಳಿಕೆಯನ್ನು ನಿಡಿ-8 ಎಂದು ಗುರುತಿಸಲಾಯಿತು. ಇಟ್ಟಿಗೆಯಿಂದ ಗಾಜಿಗೆ ಹೊಡೆದಾಗ ಇಟ್ಟಿಗೆ ಪುಡಿಯಾಗಿತ್ತು. ಸ್ಥಳದಲ್ಲಿ ಇಟ್ಟಿಗೆ ಮುರಿದು ಸಣ್ಣ ಪೀಸಾಗಿ ಬಿದ್ದಿತ್ತು. ಆರೋಪಿಯು ಹಿಡಿ ಗಾತ್ರದ ಒಂದು ಇಟ್ಟಿಗೆಯಿಂದ ಗಾಜಿಗೆ ಹೊಡೆದಿದ್ದರು. ಮನೆಯ ಮುಂಬಾಗಿಲಿನ ಬಲಭಾಗಕ್ಕೆ ಇದ್ದ ಕಿಟಕಿ ಗಾಜನ್ನು ಆರೋಪಿ ಹೊಡೆದು ಹಾಕಿದ್ದರು. ಈ ವಿಚಾರವು ಸಹಾ ನಿಡಿ-8 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಆ ವಿಚಾರವನ್ನು ಪೋಲಿಸರಿಗೆ ಹೇಳಿದ್ದೆ ಎಂದು ನುಡಿಯುತ್ತಾರೆ.

ಪುಡಿಯಾಗಿ ಬಿದ್ದಿದ್ದ ಇಟ್ಟಿಗೆ ಈ ದಿನ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿಯಲ್ಲ. ಹಿಡಿ ಗಾತ್ರದ ಇಟ್ಟಿಗೆ ಎಂ.ಒ.2 ರ ಪೈಕಿ ಇಲ್ಲ ಎಂದರೆ ಸರಿಯಲ್ಲ. ಎಂ.ಒ.2 ರ ಪೈಕಿ ಇರುವ ಇಟ್ಟಿಗೆ ಸುಮಾರು 1 ಕೆ.ಜಿ. ಗಿನ್ನ ಹೆಚ್ಚು ತೂಕ ಇದೆ ಎಂದರೆ ಸರಿ. ಚಾಸಾ-1 ರವರು ಬಾಳೇಹೊನ್ನೂರಿನಲ್ಲಿ ಸಿಸಿಟಿವಿ ಅಂಗಡಿ ಇಟ್ಟುಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರು ಕಂಪ್ಯೂಟರ್ ಇನ್ಸಿಟ್ಯೂಟ್ ಇಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಚಾಸಾ-1 ರವರೊಂದಿಗೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಬಳಿ ಕೆಲಸ ಮಾಡುತ್ತಿರುವ ಕಾರಣ ಅವರಿಗೆ ಸಹಾಯವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ಆರೋಪಿ ಚಾಸಾ-1 ರವರ ಮನೆ ಬಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾವು ಚಾಸಾ-1 ರವರ ಮನೆ ಬಳಿ ಹೋದಾಗ ಅಲ್ಲಿ ಸಿಸಿಟಿವಿ ಯನ್ನು ಅಳವಡಿಸಲಾಗಿತ್ತು ಎಂದರೆ ಸಾಕ್ಷಿಯು ಅದು ಚಾಲ್ತಿಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಹಳೇಯ ಸಿಸಿಟಿವಿ ಕ್ಯಾಮೆರಾಗಳನ್ನು ನಾವು ತೆಗೆದು ಹಾಕಿದ್ದೆವು.

ಚಾಸಾ-1 ರವರ ಮನೆ ಹಂಚಿನ ಮನೆಯಾಗಿತ್ತು. ನಾನು ಹೇಳಿದ ದಿನಾಂಕದಂದು ಸದರಿ ಮನೆಯಲ್ಲಿ ವೈರಿಂಗ್ ಕೆಲಸ ಮಾಡುತ್ತಿದ್ದರು. ಚಾಸಾ-1 ರವರ ಮನೆಗೆ ಹೊಸದಾಗಿ ಕಿಟಕಿ ಬಾಗಿಲುಗಳನ್ನು ಅಳವಡಿಸಲಾಗಿತ್ತು ಎಂದರೆ ಸರಿ. ಎಂ.ಒ.1 ರ ಗಾಜು ಮನೆಯ ರಿನೋವೇಷನ್ ಕಾಲಕ್ಕೆ ಹೊಡೆದುಹೋಗಿರುವ ಗಾಜುಗಳು ಎಂದರೆ ಸರಿಯಲ್ಲ. ಚಾಸಾ-1 ರವರ ಒತ್ತಡಕ್ಕೆ ಒಳಗಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮನೆಯಲ್ಲಿ ಒಟ್ಟು ಎಷ್ಟು ಕೊಠಡಿಗಳು ಇದ್ದವು ಎಂದು ನಾನು ನೋಡಿಲ್ಲ. ಮನೆಯ ಹಾಲ್ ನಂತೆ

ಇದ್ದ ಮನೆಯ ರೂಮ್ ನಲ್ಲಿ ಬೀರು ಇತ್ತು. ಚಾಸಾ-1 ರವರ ಮನೆಯ ಒಳಗೆ ಹೋಗಿಲ್ಲ, ಯಾವುದೇ ಗಲಾಟೆ ಮಾಡಿಲ್ಲ ಹಾಗೂ ಬೀರುವಿನಲ್ಲಿ ಇದ್ದ ಬಟ್ಟೆಗಳನ್ನು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಪುಡಿಯಾದ ಗಾಜನ್ನು ನೋಡಿ ನಾನೇ ನಷ್ಟವನ್ನು ಅಂದಾಜಿಸಿದ್ದೇನೆ. ಚಾಸಾ-1 ರವರ ಅತ್ತಿಗೆ ಸ್ಥಳಕ್ಕೆ ಬಂದಿದ್ದರು ಹಾಗೂ ಅವರಿಗೂ ಸಹಾ ಆರೋಪಿ ಬೈದಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಚಾಸಾ-1 ರವರ ಅತ್ತಿಗೆ ಸ್ಥಳ ಬಂದ ವಿಚಾರ ಹಾಗೂ ಆರೋಪಿ ಅವರಿಗೆ ಬೈದಿದ್ದಾರೆ ಎಂದು ಹೇಳಿರುವ ವಿಚಾರ ನಿಡಿ-8 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.